ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).— ಅ) ಬಂದಿದೆ.

ಆ) ಬಂದಿದೆ, ದೋಷಗಳನ್ನು ಸರಿಪಡಿಸುವುದಕ್ಕಾಗಿ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಎನ್.ಜಿ.ಇ.ಎಫ್.ನ ಲಾಭ ನಷ್ಟದ ಬಗೆಗೆ

೧೭೮೪. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಎನ್.ಜಿ.ಇ.ಎಫ್. ಸಂಸ್ಥೆಗಾಗಿ ತೊಡಗಿಸಿರುವ ಒಟ್ಟು ಬಂಡವಾಳ ಎಷ್ಟು?

ಆ) ಕಳೆದ ಮೂರು ವರ್ಷಗಳಲ್ಲಿ ಈ ಸಂಸ್ಥೆಯ ಲಾಭ ಮತ್ತು ನಷ್ಟದ ವರ್ಷವಾರು ವಿವರಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ೭೭೪.೦೦ ಲಕ್ಷ ರೂ.ಗಳು.

ಆ) ಕಳೆದ ಮೂರು ವರ್ಷಗಳ ಲಾಭ.

೧೯೮೩-೮೪	—	ರೂ. ೩೪.೫೬ ಲಕ್ಷ (ಲಾಭ)
೧೯೮೪-೮೫	—	ರೂ. ೯೧.೯೮ ಲಕ್ಷ (ಲಾಭ)
೧೯೮೫-೮೬	—	ರೂ. ೩೦೮.೪೭ ಲಕ್ಷ (ಲಾಭ)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರು ಕಾರ್ಮಿಕರಿಗೆ ತಮ್ಮ ಸ್ವಂತ ಹಿಡುವಳಿಯಲ್ಲಿರುವ ಮರಗಳನ್ನು ಕಡಿಯಲು ಅನುಮತಿ ನೀಡದಿರುವುದು

೧೭೮೭. ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).— ಮಾನ್ಯ ಅರಣ್ಯ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರು ಕಾರ್ಮಿಕರಿಗೆ ತಮ್ಮ ಸ್ವಂತ ಹಿಡುವಳಿಯಲ್ಲಿರುವ ಮರಗಳನ್ನು ಕಡಿಯಲು ಅರಣ್ಯ ಇಲಾಖೆಯ ಅಧಿಕಾರಿಗಳು ಈವರೆಗೆ ಅನುಮತಿ ಕೊಡದಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಕುರಿತು ಮೂರು ವರ್ಷಗಳ ಹಿಂದೆ ಅವರು ಸಲ್ಲಿಸಿದ್ದ ಅರ್ಜಿಗಳ ಮೇಲೆ ಅರಣ್ಯ ಇಲಾಖೆಯ ಉನ್ನತಾಧಿಕಾರಿಗಳು ಯಾವುದೇ ರೀತಿಯ ಕ್ರಮ ಕೈಗೊಳ್ಳದಿರಲು ಕಾರಣವೇನು?

ಇ) ಸದರೀ ಮನವಿಗಳನ್ನು ಕೃಷಿಕರಿಗೆ ಅನುಕೂಲ ಆಗುವ ರೀತಿ ವಿಲೇವಾರಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು).—

ಅ) ಇದು ನಿಜವಲ್ಲ. ೧೯೮೬-೮೭ನೇ ಫಿಸಾಲಿನಲ್ಲಿ ಕುಂದಾಪುರ ವಿಭಾಗದಲ್ಲಿ ೧೧೦ ಪ್ರಕರಣಗಳಲ್ಲಿಯೂ ಮಂತ್ತು ಮಂಗಳೂರು ವಿಭಾಗದಲ್ಲಿ ೪೩ ಪ್ರಕರಣಗಳಲ್ಲಿಯೂ ಅನುಮತಿ ಕೊಡಲಾಗಿದೆ.

ಆ) ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎನ್ನುವುದು ನಿಜವಲ್ಲ. ದಾಖಲಾತಿಗಳು ಸರಿ ಇಲ್ಲದಿದ್ದಂತಹ ಪ್ರಕರಣಗಳು ಮತ್ತು ವಿವಾದಾತ್ಮಕ ಪ್ರಕರಣಗಳು ಮಾತ್ರ ಇತ್ಯರ್ಥವಾಗದೇ ವ್ಯವಹಾರದಲ್ಲಿರುತ್ತವೆ. ಅಂತಹುಗಳಲ್ಲಿ ಕುಂದಾಪುರ ವಿಭಾಗದಲ್ಲಿ ೬ ಪ್ರಕರಣಗಳು ಮತ್ತು ಮಂಗಳೂರು ವಿಭಾಗದಲ್ಲಿ ೨೭ ಪ್ರಕರಣಗಳೂ ಮೂರು ವರ್ಷಕ್ಕಿಂತ ಹಿಂದಿನವು ಇರುತ್ತವೆ.